ಶ್ರೀ ಕೆ. ಲಕ್ಕಪ್ಪನವರು.—ಹಾನನ ಟ್ರೌ ಮುನಿಸಿ ಪಾಲಿಟಿಯವರು ಹಾನನದ ಮೂಲಕ ಹೋಗತಕ್ಕ ಬೆಂಗಳೂರು-ಮಂಗಳೂರು ರಸ್ತೆಯನ್ನು ಸಿಮೆಂಟ್ ಕಾಂಕ್ರೀಟ್ ಮಾಡಬೇಕೆಂದು ಹಣ ತೆಗೆದಿಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪನವರು.—ಇರಬಹುದು.

ಶ್ರೀ ಕೆ. ಲಕ್ಕಪ್ಪನವರು.—ಹಾಗಾದರೆ ಕೂಡಲೆ ಈ ಕೆಲಸವನ್ನು ನಡೆಸುವುದಕ್ಕೆ ಕಾರ್ಯಕ್ರಮ ಕೈಕೊಳ್ಳುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪನವರು.—ಆಲೋಚನೆ ಮಾಡಲಾಗುತ್ತದೆ.

ಶ್ರೀ ಆರ್. ಅನಂತರಾಮರ್ಚರವರು (ಚಾಮರಾಜ ಪೇಟೆ).—ಬೆಂಗಳೂರು-ತುಮಕೂರು ರಸ್ತೆಯನ್ನು ಸಿಮೆಂಟ್ ಕಾಂಕ್ರೀಟ್ ಮಾಡುವುದಕ್ಕೆ ಯಾವಾಗ ಷುರು ಮಾಡಲಾಯಿತು ?

ಶ್ರೀ ಎಚ್. ಸಿದ್ದವೀರಪ್ಪನವರು.— ನೋಟೀಸ್.

ಶ್ರೀ ಆರ್. ಅನಂತರಾಮರ್ಚರವರು.—ಎಷ್ಟು ಮೈಲಿಗಳಿಗೆ ಈಗ ಸಿಮೆಂಟ್ ಪಾಡಿದೆ ?

ಶ್ರೀ ಎಚ್. ಸಿದ್ದವೀರಪ್ಪನವರು.—ನಿರ್ದಿಷ್ಟವಾಗಿ ಮೆಮ್ಮೆಲೇಜ್ ಹೇಳಬೇಕಾದರೆ ನೋಟೀಸ್ ಬೇಕು.

ಶ್ರೀ ಆರ್. ಅನಂತರಾಮರ್ಚರವರು.—ಮುಂದಕ್ಕೂ ಏನಾದರೂ ಈ ರಸ್ತೆಯನ್ನು ಮುಂದುವರಿಸುತ್ತೀರಾ?

Sri H. SIDDAVEERAPPA.—It will be done according to the plan we have kept in view.

ಶ್ರೀ ಬಿ. ರಾಜಯ್ಯನವರು (ಯಳಂದೂರು ಅನುಸೂಚಿತ ಜಾತಿಗಳು).—ಬೆಂಗಳೂರು—ನೀಲಗಿರಿ ರಸ್ತೆಯನ್ನು ಸಿಮೆಂಟ್ ಕಾಂಕ್ರೀಟ್ ಮಾಡಿಸುವುದು ಯಾವಾಗ ?

ಶ್ರೀ ಎಚ್. ಸಿದ್ದವೀರಪ್ಪನವರು.—ಈ ವರ್ಷ.

Measures to mitigate famine in Taluks of Hiriyur, Challakere and Molakalmuru.

Q.—232. Sri V. MASIYAPPA (Hiriyur).—

Will the Government be pleased to state :—

(*a*) whether Hiriyur, Challakere and Molakalmuru Taluks of Chitaldrug District are in distress of food and fodder ;

(*b*) whether any permanent measures like the construction of anecuts, reservoirs and supplying electricity are taken to mitigate famine in this area ?

A.—Sri H. SIDDAVEERAPPA (Minister for Home affairs and Agriculture) [on behalf of Sri Kadidal Manjappa (Minister for Revenue and Public Works)].

(*a*) Challakere and Molakalmuru Taluks are considered as distress areas.

(*b*) Yes.

ಶ್ರೀ ವಿ. ಮಸಿಯಪ್ಪನವರು.—(ಎ) ಪ್ರಶ್ನೆಗೆ ಉತ್ತರವಾಗಿ ಚಳ್ಳಕೆರೆ, ಮೊಳಕಾಲ್ಮುರು ತಾಲ್ಲೂಕುಗಳನ್ನು ದುರ್ಭಿಕ್ಷಕ್ಕೊಳಪಟ್ಟಿರುವ ಪ್ರದೇಶಗಳೆಂದು ಪರಿಗಣಿಸಲಾಗಿದೆಯೆಂದು ಹೇಳಿದ್ದೀರಿ. ಇದರಂತೆಯೇ ಹಿರಿಯೂರು, ಐಮಂಗಲ, ಧರ್ಮಪುರ—ಈ ಪ್ರದೇಶಗಳೆಲ್ಲಾ ಅಂದರೆ ಸುಮಾರು ಆ ಡಿಸ್ಟ್ರಿಕ್ಟಿನ ¾ ಭಾಗದಲ್ಲಿ, ಆಹಾರ ಮತ್ತು ಮೇವುಗಳಿಗೆ ಅಭಾವ ಬಂದಿದೆಯೆಂಬುದು ತಮಗೆ ಗೊತ್ತಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪನವರು.—ಹೌದು, ಸರ್ಕಾರದವರ ಗಮನಕ್ಕೆ ಬಂದಿದೆ.

ಶ್ರೀ ವಿ. ಮಸಿಯಪ್ಪನವರು.— ಆ ಪ್ರದೇಶದಲ್ಲಿ ಈ ರೀತಿಯ ಅಭಾವದ ಪರಿಹಾರಕ್ಕೆ ಏನಾದರೂ ಕಾರ್ಯಕ್ರಮ ಕೈಕೊಂಡಿದೆಯೇ ?

Mr. SPEAKER.—It does not arise in view of the answer to the previous question.

ಶ್ರೀ ವಿ. ಮಸಿಯಪ್ಪನವರು.—ಉತ್ತರದಲ್ಲಿ, ಅಣೆಕಟ್ಟುಗಳನ್ನೂ, ಜಲಾಶಯಗಳನ್ನೂ ಕಟ್ಟಿಸುವುದು, ವಿದ್ಯುಚ್ಛಕ್ತಿ ಸರಬರಾಜು ಮಾಡುವುದು ಮೊದಲಾದ statutory ಪರಿಹಾರ ಕಾರ್ಯಕ್ರಮಗಳನ್ನು ಕೈಕೊಂಡಿದೆಯೆಂದು ಹೇಳಿದ್ದೀರಿ. ಅಂಥ ಪರಿಹಾರ ಕಾರ್ಯಕ್ರಮಗಳ ಹೆಸರನ್ನು ಹೇಳುತ್ತೀರಾ ?

Mr. SPEAKER.—On a previous occasion answers to these questions have been furnished.

ಶ್ರೀ ವಿ. ಮಸಿಯಪ್ಪನವರು.—ವಿದ್ಯುಚ್ಛಕ್ತಿಯನ್ನು ಯಾವ್ಯಾವ ಗ್ರಾಮಗಳಿಗೆ ಒದಗಿಸಲಾಗಿದೆ ?

ಶ್ರೀ ಎಚ್. ಸಿದ್ದವೀರಪ್ಪನವರು.—ನೋಟೀಸ್ ಬೇಕು.

ಶ್ರೀ ಕೆ. ಪಂಚಾಕ್ಷರಯ್ಯನವರು (ಅರಸೀಕೆರೆ).—ಅರಸೀಕೆರೆ ತಾಲ್ಲೂಕು 'ಡಿಸ್ಟ್ರೆಸ್ ಏರಿಯಾ' ಎಂದು ಘೋಷಿಸಲ್ಪಟ್ಟಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪನವರು.—ಈ ಉಪಪ್ರಶ್ನೆ ಉದ್ಭವಿಸುವುದಿಲ್ಲ.

Gayathri Reservoir and Narayanapura Anicut Project.

Q.—234. Sri V. MASIYAPPA (Hiriyur).—

Will the Government be pleased to state :—

(*a*) when the estimates for the Gayathri Reservoir and Narayanapura Anicut were sanctioned ;

(*b*) why action has not been taken to start the works ?

A.—Sri H. SIDDAVEERAPPA (Minister for Home Affairs and Agriculture) [on behalf of Sri Kadidal